**<u>ದಿನಾಂಕ 18.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ .</u>**

ನಿ.ಆರ್ 1 ಅನ್ನು ಸಚಿನ್ ಎಂಬುವವರು ನೀಡಿದ್ದು, ಅವರು ಕಂಪನಿಯ ಮ್ಯಾನೇಜರ್ ಆಗಿರುತ್ತಾರೆ. ಅಪಘಾತದ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ. ಪೊಲೀಸ್ ದಾಖಲಾತಿಗಳ ಆಧಾರದ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ. ನಮ್ಮ ಮತ್ತು ವಾಹನದ ಮಾಲೀಕರ ನಡುವೆ ಆದ ವಿಮಾ ಕರಾರಿನ ಬಗ್ಗೆ ನನಗೆ ಮಾಹಿತಿ ಇದೆ. ಆಪಾದಿತ ವಾಹನದ ವಿಮೆ ಅಪಘಾತವಾದ ದಿನಾಂಕದಂದು ಚಾಲ್ತಿಯಲ್ಲಿತ್ತು ಎಂದರೆ ಸರಿ. ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಂತೆ 3ನೇ ಪಾರ್ಟಿಯ ಭಾದ್ಯತೆಗೆ ಒಳಪಟ್ಟಿರುತ್ತದೆ. ಅರ್ಜಿದಾರರು ಪ್ರಸ್ತುತ ಪ್ರಕರಣದಲ್ಲಿ ವಿಮಾ ಕರಾರಿಗೆ ಸಂಬಂಧಿಸಿದಂತೆ 3ನೇ ಪಾರ್ಟಿ ಎಂದರೆ ಸರಿ. ಅರ್ಜಿದಾರರ ಅಜಾರೂಕತೆಯಿಂದ ಅಪಘಾತ ಆಗಿದೆ ಎಂದು ಪ್ರಮಾಣ ಪತ್ರದಲ್ಲಿ ತಿಳಿಸಿದ್ದು, ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅಂತಿಮ ವರದಿಯಲ್ಲಿಯೇ ಕಂಡುಬರುತ್ತದೆ ಎಂದು ನುಡಿಯುತ್ತಾರೆ. ಆಪಾದಿತ ವಾಹನದ ಚಾಲಕನಿಗೆ ಪರವಾನಗಿ ಇಲ್ಲ ಎಂಬ ಕಾರಣದಿಂದ ನಾವು ಬಾಧ್ಯತೆಯಿಂದ ತಪ್ಪಿ ಸಿಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಾವತಿಸುವ ಜವಾಬ್ದಾರಿಯಿಂದ ತಪ್ಪಿ ಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**